Misappropriation of funds in Malak Samudra Panchayat

422 SRI PRABHURAJ PATIL (Yelburga).—Will the Minister for Rural Development and Panchayat Raj be pleased to state :—

(*a*) whether it is a fact that misappropriation of funds has taken place in Malaksamudra Panchayat. Yelburga Taluk in Raichur District ;

(*b*) the persons responsible for this ;

(*c*) whether it has come to the notice of the Government that the affairs of this Panchayat are not conducted properly ;

(*d*) the steps taken by the Government against the persons responsible for misappropriation ;

(*e*) whether Government intends to take over the said Panchayat?

SRI K. PRABHAKAR (Minister for Rural Development and Panchayat Raj).—

(*a*) Yes.

(*b*) Panchayat Chairman.

(*c*) Yes.

(*d*) Action will be taken in accordance with law.

(*e*) It will be considered if necessary.

ಶ್ರೀ ಪ್ರಭುರಾಜ ಪಾಟೀಲ್.—ಸ್ವಾಮಿ, ಈ ಪ್ರಶ್ನೆಯ (ಬಿ)ಗೆ ಉತ್ತರವಾಗಿ ನಿಜ ಅಂತ ಹೇಳಿದ್ದೀರಿ. ಆದುದರಿಂದ ಇದರ ಬಗ್ಗೆ ತಾವು ಒಪ್ಪಿಕೊಂಡ ಹಾಗಾಯ್ತು. ಮತ್ತು (ಬಿ)ಗೆ ಉತ್ತರವಾಗಿ ಪಂಚಾಯಿತಿ ಛೇರ್ಮನ್ನರು ಅಂತ ಹೇಳಿದ್ದೀರಿ. ಇದನ್ನೂ ಸಹ ತಾವು ಒಪ್ಪಿಕೊಂಡ ಹಾಗಾಯ್ತು. ಇದೇ ಪ್ರಶ್ನೆಯ (ಇ) ಪ್ರಶ್ನೆಗೆ ಅವಶ್ಯ ಕಂಡು ಬಂದಲ್ಲಿ ಪರಿಶೀಲನೆ ಮಾಡುವುದು ಅಂತ ಹೇಳಿದ್ದೀರಿ. ಇದರಲ್ಲಿ ನನಗೆ ತಿಳಿದ ಮಟ್ಟಿಗೆ ಅವಶ್ಯ ಕಂಡು ಬಂದಲ್ಲಿ ಅನ್ನುವ ಪ್ರಶ್ನೆಯೇ ಬರುವುದಿಲ್ಲ. ಆದುದರಿಂದ ಇದರ ಬಗ್ಗೆ ನಿಶ್ಚಿತವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ತಮ್ಮ ನಿರ್ದಿಷ್ಟ ನೀತಿ ಏನು ಇದೆ ಅನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಕೆ. ಪ್ರಭಾಕರ್.—ನದರಿ ಪಂಚಾಯಿತಿಯನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದರೆ ಕಾನೂನು ರೀತ್ಯಾ ಕೆಲವು ನಿಯಮಗಳು ಇವೆ. ಹಾಗೆಯೇ ಏಕ್‌ದಮ್ ಆಗಿ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಅನ್ನುವ ಅರ್ಥದಲ್ಲಿ ಉತ್ತರದಲ್ಲಿ ಹಾಗೆ ಹೇಳಿದೆ. ಇದರ ಅವಶ್ಯಕತೆ ಕಂಡು ಬರಬೇಕಾದರೆ ಆ ಬಗ್ಗೆ ಪೂರ್ಣ ಪರಿಶೀಲನೆ ನಡೆಸಿ ಸಂಪೂರ್ಣ ಮಾಹಿತಿ ಮೇರೆಗೆ ಅದು ಸರಿ ಎಂದು ಸರ್ಕಾರಕ್ಕೆ ಗೊತ್ತಾದರೆ ಆಗ ಅದು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಸರಿಯಾಗಿದೆ

ಶ್ರೀ ಪ್ರಭುರಾಜ ಪಾಟೀಲ್ — ಅವರು ಹಣವನ್ನು ದುರುಪಯೋಗ ಮಾಡಿದ್ದಾರೆಲ್ಲಾ ಆ ಹಣವನ್ನು ವಾಪಸ್ಸು ಮಾಡುವುದಕ್ಕೆ ಎಷ್ಟು ದಿನಗಳಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಕೆ ಪ್ರಭಾಕರ್.—ಅದಕ್ಕೇನೂ ಬಹಳ ದಿವಸದ ಅವಕಾಶ ಬೇಕಾಗಿಲ್ಲ. ಈ ಹಣ ದುರ್ವಿನಿಯೋಗವಾಗಿದೆ ಅಂತ ಒಪ್ಪಿಕೊಂಡ ಮೇರೆ ಕಾನೂನು ರೀತ್ಯಾ ಅದಷ್ಟು ಬೇಗ ಅದರ ಬಗ್ಗೆ ತಪಾಸಣೆ ನಡೆಸುತ್ತೇವೆ.